ಸರ್ಕಾರಿ ಆದೇಶ ಸಂಖ್ಯೆ: ವಾಕೈ 28 ಜಕೈಯೋ 2015, ದಿನಾಂಕ: 02-02-2016ಕ್ಕೆ ಅನುಬಂಧ

## ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ವೈಯಕ್ತಿಕ ವಸತಿ ಕಾರ್ಯಗಾರ ಯೋಜನೆಯ ಮಾರ್ಗಸೂಚಿಗಳು

ಪೀಠಿಕೆ

ರಾಜ್ಯದ ನೇಕಾರರಿಗೆ ಸಾಮಾಜಿಕ ಬದುಕನ್ನು ರೂಪಿಸಿ ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರವು 2009-10 ನೇ ಸಾಲಿನ ಆಯವ್ಯಯದಲ್ಲಿ ವಸತಿ ಕಾರ್ಯಗಾರ ಯೋಜನೆಯನ್ನು ಘೋಷಿಸಿರುತ್ತದೆ. ನೇಕಾರರಿಗೆ ಉತ್ತಮ ಕಾರ್ಯಸ್ಥಳ, ಪರಿಸರ ಉತ್ತಮವಾದ ಬೆಳಕಿನ ವಾತಾವರಣ ಹಾಗೂ ಕೆಲಸದ ಅವಧಿಯಲ್ಲಿ ಹೆಚ್ಚಳ ಹೊಂದಲು ಮೂಲಭೂತ ಸೌಕರ್ಯಗಳೊಂದಿಗೆ ನೇಕಾರರ ತಲೆ ಮೇಲೆ ಒಂದು ಸೂರನ್ನು ನೀಡುವುದು ಇದರ ಉದ್ದೇಶವಾಗಿರುತ್ತದೆ. ರಾಜ್ಯದ ನೇಕಾರರಿಗೆ ಸಾಮಾಜಿಕ ಭದ್ರತೆಯ ನೆಲೆಗಟ್ಟಿನಲ್ಲಿ ನೆಮ್ಮದಿ ಜೀವನವನ್ನು ಸಾಗಿಸಲು ಅವಕಾಶ ಕಲ್ಪಿಸಿಕೊಡಲು ಮತ್ತು ಈ ಯೋಜನೆ ಅನುಷ್ಠಾನದಲ್ಲಿ ಅನುಸರಿಸ ಬೇಕಾದ ವಿವಿಧ ಕಾರ್ಯವಿಧಾನಗಳ ಮಾರ್ಗಸೂಚಿಯನ್ನು ಜಾರಿಗೊಳಿಸಿದೆ.

**ಯೋಜನಾ ಅನುಷ್ಠಾನ:** ಗ್ರಾಮ ಪಂಚಾಯತ್ ಮೂಲಕ ಉಪ/ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರು ಅನುಷ್ಠಾನಗೊಳಿಸುವುದು.

**ಜಿಲ್ಲಾ ಮಟ್ಟದ ಪರಿಶೀಲನಾ ಅಧಿಕಾರಿಗಳು:** ಜಂಟಿ /ಉಪ/ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣಾಧಿಕಾರಿಗಳು.

**ರಾಜ್ಯ ಮಟ್ಟದ ಪರಿಶೀಲನಾ ಇಲಾಖೆಗಳು:** ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು.

**ಸರ್ಕಾರದ ಮಟ್ಟದ ಪರಿಶೀಲನಾ ಇಲಾಖೆ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.

**ಪ್ರತಿ ವಸತಿ ಕಾರ್ಯಗಾರಗಳ ನಿರ್ಮಾಣ ವೆಚ್ಚ: ರೂ.2,50,000/-**

| ಕ್ರ. ಸಂ | ವಿವರ | ಅನುದಾನ (ರೂ.ಗಳಲ್ಲಿ) | | |
|---|---|---|---|---|
| | | ಸಾಮಾನ್ಯ ಫಲಾನುಭವಿಗಳಿಗೆ ರೂ. | ಪ.ಜಾ/ಪ.ಪಂ.ದ ಫಲಾನುಭವಿಗಳಿಗೆ (2015-16ನೇ ಸಾಲಿಗೆ ಮಾತ್ರ) ರೂ. | ಪ.ಜಾ/ಪ.ಪಂ.ದ ಫಲಾನುಭವಿಗಳಿಗೆ (2016-17ನೇ ಸಾಲಿನಿಂದ) ರೂ. |
| 1 | ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪ್ರತಿ ವಸತಿ ಕಾರ್ಯಗಾರಗಳಿಗೆ ನೀಡುವ ಸಹಾಯಧನ ಮೊತ್ತ | 1,00,000 | 2,25,000 | 1,00,000 |
| 2 | ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪ್ರತಿ ವಸತಿ ಕಾರ್ಯಗಾರಗಳಿಗೆ ನೀಡುವ ಸಾಲ | 30,000 | 25,000 | 30,000 |
| 3 | ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ವತಿಯಿಂದ ನೀಡುವ ಸಹಾಯಧನ ಮೊತ್ತ | 1,20,000 | - | 1,20,000 |
| 4 | ಫಲಾನುಭವಿಗಳ ವಂತಿಕೆ | | - | - |
| | ಒಟ್ಟು ಮೊತ್ತ | 2,50,000 | 2,50,000 | 2,50,000 |

**ವಸತಿ ಕಾರ್ಯಗಾರಗಳನ್ನು ಪಡೆಯಲು ನೇಕಾರರ ಕನಿಷ್ಠ ಅರ್ಹತೆಗಳು:**

- ಫಲಾನುಭವಿಯು ವೃತ್ತಿ ನಿರತ /ನೇಯ್ಗೆ ಚಟುವಟಿಕೆಗಳಲ್ಲಿ ಕಾರ್ಯನಿರತರಾಗಿರಬೇಕು.
- ನೇಯ್ಗೆ ಚಟುವಟಿಕೆಗಳಿಂದ ಕನಿಷ್ಠ ಶೇ.50 ರಷ್ಟು ವಾರ್ಷಿಕ ಆದಾಯ ಹೊಂದಿರಬೇಕು.
- ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ ಮತ್ತು ಜಿಲ್ಲಾ ವಲಯ ಯೋಜನೆಗಳಡಿ ಯಾವುದೇ ಇಲಾಖೆ ಅಥವಾ ಕಾರ್ಯಕ್ರಮಗಳಲ್ಲಿ ವಸತಿ ಸೌಲಭ್ಯವನ್ನು ಹಿಂದೆ ಪಡೆದಿರಬಾರದು.
- ವಸತಿ ರಹಿತ ನೇಕಾರರಾಗಿರಬೇಕು.
- ಸರ್ಕಾರದ ಯಾವುದೇ ಯೋಜನೆಗಳಡಿ ಪತಿ ಅಥವಾ ಪತ್ನಿಯ ಹೆಸರಿನಲ್ಲಿ ಇಂತಹ ಸೌಲಭ್ಯವನ್ನು ಹಿಂದೆ ಪಡೆದಿರಬಾರದು.
- ಒಂದೇ ಕುಟುಂಬದಲ್ಲಿ ವಾಸವಾಗಿರುವ ಸದಸ್ಯರಿಗೆ ಗಂಡ ಅಥವಾ ಹೆಂಡತಿ ಹೆಸರಿನಲ್ಲಿ ಒಂದು ಮನೆಗೆ ಮಾತ್ರ ಈ ಸೌಲಭ್ಯ ಅನ್ವಯಿಸತಕ್ಕದ್ದು.
- ನೇಕಾರಿಕೆ ವೃತ್ತಿ ಅವಲಂಬಿಸಿರುವ ಫಲಾನುಭವಿಯು ಕನಿಷ್ಠ 18 ವರ್ಷ ವಯೋಮಿತಿ ಹೊಂದಿರತಕ್ಕದ್ದು.
- ಆಯ್ಕೆಯಾದ ಇತರೆ ಜನಾಂಗದ ಫಲಾನುಭವಿಗಳು ತಮ್ಮ ವಂತಿಕೆ ಹಣ ರೂ.30,000/- ಗಳನ್ನು ನಿರ್ಮಾಣ ಹಂತದಲ್ಲಿಯೇ ಹೂಡುವುದು.

**ವಸತಿ ಕಾರ್ಯಗಾರಗಳನ್ನು ನಿರ್ಮಿಸಲು ಜಾಗದ ಲಭ್ಯತೆ ಹಾಗೂ ವಿಸ್ತೀರ್ಣ:**

- ವಸತಿ ಕಾಯಾಗಾರದ ವಿಸ್ತೀರ್ಣ ಕನಿಷ್ಠ 400 ಚ.ಅ. ಹಾಗೂ ಗರಿಷ್ಠ 700 ಚ.ಅ ಇರತಕ್ಕದ್ದು.
- ನಿರ್ಮಿಸುವ ಕಟ್ಟಡದಲ್ಲಿ ವಾಸಿಸಲು ಕೊಠಡಿ, ಮಗ್ಗ ಅಳವಡಿಸಲು ಕಾರ್ಯಾಗಾರ, ಅಡುಗೆ ಕೋಣೆ, ಶೌಚಾಲಯ, ಸ್ನಾನದ ಕೋಣೆಗಳನ್ನು ಹೊಂದಿರತಕ್ಕದ್ದು.
- ನಿರ್ಮಿತ ಕಟ್ಟಡಕ್ಕೆ ನಕಾಶೆಯಂತೆ ನೈರ್ಮಲ್ಯ, ಕೊಳಚೆ ನೀರು / ತ್ಯಾಜ್ಯ ವಸ್ತುಗಳ ವಿಸರ್ಜನೆಗೆ ಅನುಕೂಲ ವಾತಾವರಣ ಇರತಕ್ಕದ್ದು.
- ಕಟ್ಟಡದ ಗುಣಮಟ್ಟವನ್ನು ಉತ್ತಮವಾಗಿರುವಂತೆ ಕಾಯ್ದುಕೊಳ್ಳುವುದು.

**ವಸತಿ ಕಾರ್ಯಾಗಾರಗಳನ್ನು ಪಡೆಯಲು ಫಲಾನುಭವಿಯು ಸಲ್ಲಿಸಬೇಕಾಗಿರುವ ದಾಖಲಾತಿಗಳು :**

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಇತ್ತೀಚಿನ ಭಾವಚಿತ್ರದೊಂದಿಗೆ ಇತರೆ ಮಾಹಿತಿಗಳು.
- ಜಾತಿ ಪ್ರಮಾಣ ಪತ್ರ.
- ನಿವೇಶನದ ದಾಖಲಾತಿಗಳು; ಖಾತೆ ಪ್ರತಿ / ಹಕ್ಕು ಪತ್ರ / ಮಂಜೂರಾತಿ ಪತ್ರ / ನೋಂದಾವಣೆ ಪ್ರತಿ.
- ಸ್ಥಳೀಯ ಪ್ರಾಧಿಕಾರದಿಂದ ಪಡೆದ ಕಟ್ಟಡದ ಲೈಸೆನ್ಸ್/ ಪರವಾನಗಿ.
- ಸ್ಥಳೀಯ ಪ್ರಾಧಿಕಾರ / ಗ್ರಾಮ ಪಂಚಾಯಿತಿಯಿಂದ ನೀಡಿದ ನಿರಪೇಕ್ಷಣಾ ಪತ್ರ.
- ಪ್ರಾಥಮಿಕ ನೇಕಾರರ ಸಹಕಾರ ಸಂಘದ ಸದಸ್ಯರಾಗಿದ್ದಲ್ಲಿ ಸಂಘದ ಧೃಢೀಕರಣ / ಠರಾವು ಪತ್ರ.

**ನೇಕಾರ ಫಲಾನುಭವಿಗಳ ಆಯ್ಕೆ ಸಮಿತಿ :**

| | | |
|---|---|---|
| 1. | ಜಂಟಿ ನಿರ್ದೇಶಕರು (ಕೈಜಇ), ಸಂಬಂಧಪಟ್ಟ ವಿಭಾಗ ಕಚೇರಿ. | ಅಧ್ಯಕ್ಷರು |
| 2. | ಉಪ / ಸಹಾಯಕ ನಿರ್ದೇಶಕರು (ಕೈಜಇ), ಜಿಲ್ಲಾ ಪಂಚಾಯತ್ | ಸದಸ್ಯ ಕಾರ್ಯದರ್ಶಿ |
| 3. | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 4. | ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು | ಸದಸ್ಯರು |
| 5. | ಸಹಕಾರ ಸಂಘಗಳ ಉಪ ನಿಬಂಧಕರು, ಸಹಕಾರ ಇಲಾಖೆ | ಸದಸ್ಯರು |

ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕವಾಗಿ ವ್ಯಾಪಕ ಪ್ರಚಾರದ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು. ಜಿಲ್ಲಾ ಕಛೇರಿಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಮಾಹಿತಿಯ ಆಧಾರದ ಮೇಲೆ ಪ್ರತಿ ಫಲಾನುಭವಿಯ ವಾಸ ಸ್ಥಳ, ಕಾರ್ಯಚಟುವಟಿಕೆ ಮತ್ತು ಅರ್ಹತೆಯ ವಿವರಗಳನ್ನು ಕೂಲಂಕುಷವಾಗಿ ಸ್ಥಳ ಪರಿಶೀಲನೆ ನಡೆಸತಕ್ಕದ್ದು. ಕ್ರೋಢೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯತಕ್ಕದ್ದು. ಈ ಸಮಿತಿಯಲ್ಲಿ ನಿಯಮಾನುಸಾರ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಕ್ರೋಢೀಕೃತ ವಿವರಗಳೊಂದಿಗೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡುವುದು.

**ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪಾತ್ರ ಮತ್ತು ಜವಾಬ್ದಾರಿಗಳು :**

- ವಸತಿ ಕಾರ್ಯಾಗಾರ ನಿರ್ಮಾಣಕ್ಕೆ ಪ್ರತಿ ಮನೆಗೆ ರೂ.1,20,000 ಒದಗಿಸುವುದು.
- ವಸತಿ ಕಾರ್ಯಾಗಾರಗಳಿಗೆ ಜಿ.ಪಿ.ಎಸ್ ಪ್ರಗತಿಗೆ ಅನುಸಾರವಾಗಿ ನಾಲ್ಕು ಹಂತಗಳಲ್ಲಿ ಅಂದರೆ ತಳಪಾಯ, ಗೋಡೆ/ಲಿಂಟಲ್, ಛಾವಣಿ ಹಾಗೂ ಪೂರ್ಣಗೊಂಡ ಹಂತಗಳಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಧನದ ಮೊತ್ತ ರೂ. 1.00 ಲಕ್ಷ ಮತ್ತು ಸಾಲದ ಮೊತ್ತ ರೂ. 30,000 ಗಳು ಸೇರಿ ನಿಗಮದಿಂದ ಒಟ್ಟು ರೂ. 2,50,000/- ಗಳನ್ನು ನೇಕಾರರ ಖಾತೆಗೆ ಬಿಡುಗಡೆ ಮಾಡುವುದು.

**ಕೈಮಗ್ಗ ಮತ್ತು ಜವಳಿ ಇಲಾಖೆಯ ಪಾತ್ರ ಮತ್ತು ಜವಾಬ್ದಾರಿಗಳು-(ಜಿಲ್ಲಾ ಮಟ್ಟದ ಕಛೇರಿಗಳ ಮುಖಾಂತರ) :**

- ಸರ್ಕಾರದ ವಿವಿಧ ಯೋಜನೆಗಳಡಿ ತರಬೇತಿ ಹೊಂದಿ ಸುಧಾರಿತ ಮಗ್ಗ ಮತ್ತು ಸಲಕರಣೆಗಳನ್ನು ಪಡೆದ ಫಲಾನುಭವಿಗಳಿಗೆ ಆದ್ಯತೆ ನೀಡುವುದು.
- ವಸತಿ ಕಾರ್ಯಾಗಾರ ಸೌಲಭ್ಯ ಪಡೆದ ಪ್ರತಿ ಫಲಾನುಭವಿಗಯ ಪೂರ್ಣ ವಿವರಗಳನ್ನು ಜಿಲ್ಲಾ ಮಟ್ಟದ ಕಛೇರಿಯಲ್ಲಿ ದಾಖಲಾತಿಯಾಗಿ ನಿರ್ವಹಿಸುವುದು.
- ಕಟ್ಟಡ ಕಾಮಗಾರಿಯ ಬಳಕೆ ಹಾಗೂ ಅದರಿಂದ ಆಗಿರುವ ಪರಿಣಾಮಗಳ ಬದಲಾವಣೆಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ವರದಿ ಮಾಡುವುದು.
- ಕಾಮಗಾರಿ ಪೂರ್ಣಗೊಳ್ಳುವವರೆಗೆ ಕ್ಷೇತ್ರ ಮಟ್ಟದಲ್ಲಿ ಕಾಲಕಾಲಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನಾ ಪ್ರಗತಿಯ ಹಂತದ ಬಗ್ಗೆ ಪರಿಶೀಲನೆ ನಡೆಸುವುದು.
- ಪ್ರತಿ ತ್ರೈಮಾಸಿಕ ಅವಧಿಗೆ ಪ್ರಗತಿ ವರದಿಯನ್ನು ಸಲ್ಲಿಸುವುದು.
- ~~ವಸತಿ ಕಾರ್ಯಾಗಾರ ನಿರ್ಮಾಣಕ್ಕೆ ಪ್ರತಿ ಮನೆಗೆ ರೂ. 1,30,000 ಗಳನ್ನು ಕೈಮಗ್ಗ ಮತ್ತು~~ ಜವಳಿ ಇಲಾಖೆಯು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಬಿಡುಗಡೆ ಮಾಡುವುದು.
- 2015-16ನೇ ಸಾಲಿಗೆ ಎಸ್.ಸಿ/ಎಸ್.ಟಿ. ಫಲಾನುಭವಿಗಳಿಗೆ ಎಲ್.ಸಿ.ಡಬ್ಲ್ಯೂ ಘಟಕ ವೆಚ್ಚ ರೂ. 2.50 ಲಕ್ಷಗಳನ್ನು ಶೇ. 90 ರಷ್ಟು ಅನುದಾನ ರೂ. 2.25 ಲಕ್ಷಗಳನ್ನು ಸಹಾಯಧನವಾಗಿ ಹಾಗೂ ಸಾಲದ ಮೊತ್ತ ರೂ. 0.25 ಲಕ್ಷಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯು ಭರಿಸಲಿದೆ.
- ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ನಿಯಮಾನುಸಾರ ಒಟ್ಟಾರೆ ಭೌತಿಕ ಗುರಿಯಲ್ಲಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಕನಿಷ್ಠ ಶೇ.16.20 ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.6.55 ರಷ್ಟು ಮನೆಗಳನ್ನು ಮೀಸಲಿರಿಸತಕ್ಕದ್ದು ಹಾಗೂ ಅದರನ್ವಯ ಆಯ್ಕೆ ಮಾಡತಕ್ಕದ್ದು.

**ಮನೆಗಳ ಹಸ್ತಾಂತರ ಮತ್ತು ಯೋಜನೆಯ ಮುಕ್ತಾಯ:**

ಕೈಮಗ್ಗ ಮತ್ತು ಜವಳಿ ಇಲಾಖೆಯ ವಸತಿ ಕಾರ್ಯಾಗಾರ ಯೋಜನೆಯಡಿಯಲ್ಲಿ ಮನೆಗಳ ಮೂಲಭೂತ ಸೌಕರ್ಯ ಕಾಮಗಾರಿಯನ್ನು ಮುಕ್ತಾಯಗೊಳಿಸಿದ ನಂತರ ನಿರ್ಮಾಣ ಸಂಸ್ಥೆಯು "Third Party" ಯವರಿಂದ "ಯೋಜನೆ ಮುಕ್ತಾಯ ಪ್ರಮಾಣ ಪತ್ರ" ಹಾಗೂ "ಯೋಜನಾ ದೃಢತೆ ಪ್ರಮಾಣ ಪತ್ರ" ಪಡೆದ ನಂತರ ಜವಳಿ ಇಲಾಖೆಯ ಮೂಲಕ ಫಲಾನುಭವಿಗಳಿಗೆ ಮನೆ ಹಸ್ತಾಂತರಿಸುವುದು. ಇದೇ ಸಂದರ್ಭದಲ್ಲಿ ಬಡಾವಣೆಯ ನಿರ್ವಹಣೆ ಜವಾಬ್ದಾರಿಯನ್ನು ಗ್ರಾಮ ಪಂಚಾಯತ್ / ನಗರ ಸ್ಥಳೀಯ ಸಂಸ್ಥೆಯು ನಿರ್ವಹಿಸುವುದು.

ಕಾಮಗಾರಿ ಆದೇಶ ನೀಡಿದ 6 ತಿಂಗಳೊಳಗೆ ವಸತಿ ಕಾರ್ಯಾಗಾರವನ್ನು ಮುಕ್ತಾಯಗೊಳಿಸುವುದು ನಿರ್ಮಾಣ ಸಂಸ್ಥೆಯ / ಫಲಾನುಭವಿಗಳ ಜವಾಬ್ದಾರಿ ಆಗಿರುತ್ತದೆ.

ನಿರ್ಮಾಣ ಸಂಸ್ಥೆಯ ಯೋಜನಾ ದೃಢತೆ ಪ್ರಮಾಣ ಪತ್ರ, ಮುಕ್ತಾಯ ಪ್ರಮಾಣ ಪತ್ರ ಮತ್ತು ಗ್ರಾಮ ಪಂಚಾಯಿತಿ / ನಗರ ಸಂಸ್ಥೆಗೆ ಬಡಾವಣೆ ಹಸ್ತಾಂತರ ಪ್ರಮಾಣ ಪತ್ರವನ್ನು ನಿಗಮಕ್ಕೆ ಸಲ್ಲಿಸಿದ ನಂತರ ಯೋಜನೆಯನ್ನು ಮುಕ್ತಾಯಗೊಳಿಸಲಾಗುವುದು.

**ಫಲಾನುಭವಿಗಳಿಗೆ ನಿಬಂಧನೆಗಳು :**

- ಸರ್ಕಾರದಿಂದ ಪಡೆದ ಆರ್ಥಿಕ ಸೌಲಭ್ಯದಿಂದ ನಿರ್ಮಿಸಿದ ಕಟ್ಟಡದಲ್ಲಿ ನಿರಂತರವಾದ ನೇಯ್ಗೆ ವೃತ್ತಿಯನ್ನು ಮುಂದುವರಿಸುವುದು ಹಾಗೂ ಇದರಿಂದ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಅವಕಾಶ ಹೊಂದುವುದು.
- ಬಿಡುಗಡೆ ಮಾಡಿದ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆಗೊಳಿಸಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು.
- ಅನುದಾನದಿಂದ ನಿರ್ಮಿಸಿದ ಕಟ್ಟಡವನ್ನು ಇತರೆ ಯಾವುದೇ ವ್ಯಕ್ತಿಗೆ ಉಪಬಾಡಿಗೆ / ಲೀಸ್‌ಗೆ ನೀಡಬಾರದು ಅಥವಾ ಮುಂದಿನ 10 ವರ್ಷಗಳ ಅವಧಿಗೆ ಇಲಾಖೆಯ ಪೂರ್ವಾನುಮತಿ ಇಲ್ಲದೆ ಪರಬಾರೆ ಮಾಡಬಾರದು.
- ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶ / ನಿಯಮಗಳಿಗೆ ಬದ್ಧವಾಗಿರಬೇಕು.
- ಕಟ್ಟಡದ ಗೋಡೆಯ ಮುಂದಿನ ಭಾಗದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಆರ್ಥಿಕ ನೆರವಿನಿಂದ ನಿರ್ಮಿಸಲಾದ ಕಟ್ಟಡವೆಂದು ನಾಮಫಲಕವನ್ನು ಕಡ್ಡಾಯವಾಗಿ ಬರೆಸತಕ್ಕದ್ದು.
- ಕಟ್ಟಡ ಕಾಮಗಾರಿ ಪೂರ್ಣಗೊಳಿಸಿರುವ ಬಗ್ಗೆ ಅಧಿಕೃತ ಇಂಜಿನಿಯರ್‌ರವರಿಂದ ಕಂಪ್ಲೀಷನ್ ಸರ್ಟಿಫಿಕೇಟ್ ಹಾಗೂ ಪೋಟೋ ದಾಖಲೀಕರಣವನ್ನು ಇಲಾಖೆಗೆ ನೀಡತಕ್ಕದ್ದು.
- ಹಣ ಬಳಕೆ ಪ್ರಮಾಣ ಪತ್ರವನ್ನು ಪ್ರತಿ ಬಿಡುಗಡೆಯಾದ ವೆಚ್ಚಕ್ಕೆ ದೃಢೀಕರಿಸಿ ಕಡ್ಡಾಯವಾಗಿ ಸಲ್ಲಿಸಬೇಕು.
- ನಿರ್ಮಾಣ ಹಂತದಲ್ಲಿ ಫಲಾನುಭವಿ ಆಕಸ್ಮಿಕವಾಗಿ /ಸ್ವಾಭಾವಿಕವಾಗಿ ಮರಣ ಹೊಂದಿದಲ್ಲಿ ಈ ಸೌಲಭ್ಯವನ್ನು ಕಾನೂನು ರೀತ್ಯ ಹಕ್ಕುಳ್ಳ ಫಲಾನುಭವಿಯ ವಾರಸುದಾರರಿಗೆ ವರ್ಗಾಯಿಸಲು ಅವಕಾಶ ಕಲ್ಪಿಸುವುದು.
- ವಸತಿ ಕಾರ್ಯಾಗಾರ ಯೋಜನೆಯಡಿ ವಸತಿ ಸೌಲಭ್ಯ ಪಡೆಯುವ ಪ್ರತಿ ಫಲಾನುಭವಿಯು ತನ್ನ ಮನೆಯಲ್ಲಿ ಕನಿಷ್ಠ ಒಂದು ಕೈಮಗ್ಗವನ್ನು ಅಥವಾ ಎರಡು ವಿದ್ಯುತ್ ಮಗ್ಗಗಳನ್ನು ಅಳವಡಿಸಿಕೊಂಡು ವೃತ್ತಿ ಮುಂದುವರಿಸುವುದು.

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.